# STUDIES IN KARNATAKA HISTORY AND CULTURE

Editors

Prof. R.M. Shadakshariah
Prof. Iranna Pattar



PROCEEDINGS VOLUME- XV
29th SESSION OF THE KARNATAKA HISTORY CONGRESS
HELD AT MANASAGANGOTHRI,UNIVERSITY OF MYSORE -2018

# ವಿಜಾಪುರ ಜಿಲ್ಲೆಯ ತ್ರಿಕೂಟ ದೇವಾಲಯಗಳು

**ಡಾ. ಈರಣ್ಣ. ಕೆ. ಪತ್ತಾರ* ಪ್ರೊ. ಎಸ್.ಆರ್.ನಾಗಣ್ಣವರ****

ಕರ್ನಾಟಕ ರಾಜ್ಯದ ಬರದ ಬೀಡು, ಪಂಚನದಿಗಳ ಜಿಲ್ಲೆಯೆಂದು ಖ್ಯಾತಿಯನ್ನು ಪಡೆದುಕೊಂಡಿರುವ ಅವಿಭಜಿತ ವಿಜಾಪುರ ಜಿಲ್ಲೆಯು ಇತಿಹಾಸ ಪೂರ್ವಕಾಲದಿಂದ ಮೊದಲ್ಗೊಂಡು ಶಾತವಾಹನ, ಕದಂಬ, ಗಂಗ, ರಾಷ್ಟ್ರಕೂಟ, ಬಾದಾಮಿಯ ಮತ್ತು ಕಲ್ಯಾಣ ಚಾಲುಕ್ಯ, ವಿಜಯನಗರದ ಅರಸರು ಹಾಗೂ ಆದಿಲ್‌ಶಾಹಿ ಅರಸರುಗಳಿಂದ ಆಳಲ್ಪಟ್ಟ ಜಿಲ್ಲೆಯಾಗಿದೆ. ಬ್ರಿಟಿಷರ ಕಾಲದಲ್ಲಿ ಕಲಾದಗಿ ಜಿಲಾವ್ಯಾಪ್ತಿಯಲ್ಲಿರುವ ಈ ಜಿಲ್ಲೆಯು ಕ್ರಿ.ಶ. 1885 ರಲ್ಲಿ ಕಲಾದಗಿಯಿಂದ ಬೇರ್ಪಟ್ಟು ಪ್ರತ್ಯೇಕ ಬಿಜಾಪುರ ಜಿಲ್ಲೆಯಾಯಿತು. ಮುಂದೆ 1997 ರಲ್ಲಿ ಪುನಃ ಜಿಲ್ಲಾ ಪುನರ್‌ವಿಂಗಡನೆಯ ಫಲವಾಗಿ ಬಾಗಲಕೋಟ ಹಾಗೂ ಬಿಜಾಪುರ ಎಂದು ಎರಡು ಜಿಲ್ಲೆಯಾಗಿ ವಿಭಾಗಿಸಲ್ಪಟ್ಟಿದೆ. ಪ್ರಸ್ತುತ ಬಿಜಾಪುರ ಜಿಲ್ಲೆಯಲ್ಲಿ ಹಲವಾರು ಐತಿಹಾಸಿಕ ಅರಸು ಮನೆತನದವರು ನಿರ್ಮಿಸಿದ ಸುಂದರವಾದ ದೇವಾಲಯಗಳು ಕಂಡುಬರುತ್ತವೆ. ಅವುಗಳಲ್ಲಿ ಕೆಲವು ಏಕಕೂಟ ದ್ವಿಕೂಟ ತ್ರಿಕೂಟ ದೇವಾಲಯಗಳನ್ನು ಕಾಣಬಹುದಾಗಿದೆ. ಪ್ರಸ್ತುತ ಲೇಖನವು ಬಿಜಾಪುರ ಜಿಲ್ಲೆಯಲ್ಲಿರುವ ತ್ರಿಕೂಟ ದೇವಾಲಯಗಳಿಗೆ ಮಾತ್ರ ಸೀಮಿತವಾಗಿರಿಸಿಕೊಂಡು ರಚಿಸಲಾಗಿದೆ.

ಮೂರ್ತಿ ಸ್ಥಾಪನೆಗೊಂದು ಮನೆಯಾಗಿ, ಸರ್ವಜನರ ಸಭೆ ಸೇರಲು ಒಂದು ಸ್ಥಳವಾಗಿ ಕಂಡು ಬರುವ ಕಟ್ಟಡವೇ ದೇವಾಲಯ, ದೇವಾಲಯಗಳನ್ನು ದೇವಸ್ಥಾನ, ಗುಡಿ, ದೇಗುಲ, ದೇವಾಗಾರ, ದೇವಮಂದಿರ ಎಂದೆಲ್ಲಾ ಹಲವಾರು ಹೆಸರುಗಳಿಂದ ಕರೆಯುವುದುಂಟು. ಆದರೂ ದೇವಾಲಯಗಳ ಉಗಮ ಎಂದು? ಯಾವಾಗ? ಯಾರಿಂದ? ಆರಂಭವಾಯಿತು ಎಂದು ತಿಳಿಸುವುದು ಬಲು ಕಷ್ಟದ ಕೆಲಸ. ದೇವ ಮಂದಿರಗಳು ಬೌದ್ಧರು ನಿರ್ಮಿಸಿರುವ ಸ್ತೂಪಗಳಿಂದ ಉಗಮವಾದವುಗಳೆ? ವೇದಕಾಲದ ಯಜ್ಞ ಯಾಗಾದಿಗಳ ವೇದಿಕೆಗಳಿಂದ ರೂಪಗೊಂಡವುಗಳೆ? ಸಮಾಧಿಗಳ ಮುಂದುವರೆದ ರೂಪವೆ? ಎಂಬ ಹಲವಾರು ಪ್ರಶ್ನೆಗಳು ಉದಯವಾಗುತ್ತವೆ. ಇಂತಹ ಅಸಂಖ್ಯಾತ ಪ್ರಶ್ನೆಗಳಿಗೆ ಉತ್ತರಿಸಲು ಇಂದಿಗೂ ಸಾಧ್ಯವಾಗಿಲ್ಲ. ಆದರೂ ಅವುಗಳ ಪ್ರಾಚೀನ ಪರಂಪರೆಯನ್ನು ಕುರಿತು ಹಲವಾರು ಸಂಶೋಧಕರು, ಇತಿಹಾಸಕಾರರು ತಮ್ಮ ವಿಚಾರಗಳನ್ನು ವಿಭಿನ್ನವಾಗಿ ಹೇಳಿದ್ದಾರೆ.

ಪ್ರಕೃತಿಯ ಮಡಿಲಲ್ಲಿ ವಾಸಿಸುತ್ತಿದ್ದ ಶಿಲಾಯುಗದ ಕಾಲದ ಮಾನವನಿಗೆ ದೇವರು, ಪೂಜೆ, ಆರಾಧನೆ ಎಂಬುದರ ಬಗ್ಗೆ ಯಾವುದೇ ರೀತಿಯಾದ ಕಲ್ಪನೆಗಳಿರಲಿಲ್ಲ. ಕಾಡುಪ್ರಾಣಿಗಳಂತೆ ತಾನೂ ಸಹ ಜೀವಿಸುತ್ತಿದ್ದನು. ಕಾಲಕ್ರಮೇಣ ಮಾನವನ ಜ್ಞಾನ ವೃದ್ಧಿಯಾದಂತೆ ದೇವರು, ದೇವತೆಗಳ ಕಲ್ಪನೆ, ಆರಾಧನೆ ಮುಂತಾದ ಧಾರ್ಮಿಕ ವಿಚಾರಗಳು ಬೆಳೆಯಲಾರಂಭಿಸಿದವು. ಅದರ ಫಲವೇ ದೇವಾಲಯಗಳ ನಿರ್ಮಾಣ. ಪ್ರಾಚೀನ ಕಾಲದ ಮಾನವನಿಗೆ, ಮಾನವ ಮರಣ ಹೊಂದಿದರೂ ಅವನ ಆತ್ಮ ಮಾತ್ರ ಶಾಶ್ವತವಾಗಿರುತ್ತದೆ; ಆ ಶಾಶ್ವತವಾದ ಆತ್ಮವನ್ನು ಬೇಕಾದಾಗ ಮರಳಿ ಕರೆಯಿಸಿಕೊಳ್ಳಬಹುದು; ಅದಕ್ಕಾಗಿ ಸತ್ತ ದೇಹವನ್ನು ಸಂಸ್ಕಾರ ಮಾಡಿದ ಸ್ಥಳದಲ್ಲಿ ಅವನ ನೆನಪಿಗಾಗಿ ಸಮಾಧಿಗಳನ್ನು ಅಥವಾ ಆಲಯಗಳನ್ನು ನಿರ್ಮಿಸಲಾಯಿತು. ಆ ಆಲಯಗಳ ಪರಿವರ್ತನೆಯೇ ದೇವಾಲಯಗಳು ಎಂಬುದು ಎಸ್.ಕೆ. ರಾಮಚಂದ್ರರಾವ್ ಎಂಬ ಸಂಶೋಧಕರ ಅಭಿಪ್ರಾಯವಾಗಿದೆ. ಡಾ. ದೇವರಕೊಂಡಾರೆಡ್ಡಿಯವರು ಇಂದಿರುವ ದೇವಾಲಯಗಳ ಮೂಲ ಸಮಾಧಿಗಳು ಎಂಬುದನ್ನು ಅಲ್ಲಗಳೆಯುತ್ತಾ, ಯಾವುದೇ ಒಬ್ಬ ವ್ಯಕ್ತಿ ಮರಣಹೊಂದಿದ ಮೇಲೆ ಅವನಿಗಾಗಿ ನಿರ್ಮಿಸಿದ ಸಮಾಧಿಯ ಮೇಲೆ ಸ್ಮಾರಕಗಳನ್ನು ನಿರ್ಮಿಸಿರುವುದಾದರೂ ಆಗಮೋಕ್ತವಾದ ದೇವಾಲಯಗಳನ್ನು ನಿರ್ಮಿಸುವುದಿಲ್ಲ.

**ತ್ರಿಕೂಟ ದೇವಾಲಯಗಳ ಉಗಮ ಮತ್ತು ಬೆಳವಣಿಗೆ :**

ತ್ರಿಕೂಟ ದೇವಾಲಯಗಳನ್ನು ಮುಖ್ಯವಾಗಿ ಎರಡು ಭಾಗಗಳಲ್ಲಿ ವಿಂಗಡಿಸಲಾಗಿದೆ ಒಂದು. ತ್ರಿಕೂಟಾಚಲ ದೇವಾಲಯಗಳು ಮತ್ತೊಂದು ತ್ರೈಪುರುಷ ದೇವಾಲಯಗಳು. ತ್ರಿಕೂಟ ದೇವಾಲಯಗಳೆಂದರೆ ಮೂರು ವಿಭಿನ್ನ ಗರ್ಭಗ್ರಹಗಳನ್ನು ಹೊಂದಿದ್ದು ಪ್ರತಿಯೊಂದರಲ್ಲೂ ಲಿಂಗವನ್ನು ಕಾಣಬಹುದು. ಸಾಮಾನ್ಯವಾಗಿ ಮಧ್ಯದ ಗರ್ಭಗೃಹದಲ್ಲಿ ಲಿಂಗವಿದ್ದು ಅಕ್ಕಪಕ್ಕದ ಗರ್ಭಗೃಹದಲ್ಲಿ ಸೂರ್ಯ ಅಥವಾ ದತ್ತಾತ್ರೆಯನ ಮೂರ್ತಿಯನ್ನು ಪ್ರತಿಷ್ಠಾಪಿಸಿರುವುದು ಉಂಟು. ಅಥವಾ ಮೂರು ಗರ್ಭಗೃಹಗಳಲ್ಲಿ ಲಿಂಗಗಳನ್ನು ಪ್ರತಿಷ್ಠಾಪಿಸಿರಬಹುದು. ಗರ್ಭಗೃಹಗಳು ಒಂದರ

---

* ಪ್ರಾಧ್ಯಾಪಕರು ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
** ಸಹಾಯಕಪ್ರಾಧ್ಯಾಪಕರು, ವಿ.ಎಂ.ಎಸ್.ಆರ್.ವಸ್ತ್ರದ ಮಹಾವಿದ್ಯಾಲಯ, ಹುನಗುಂದ

ಪಕ್ಕದಲ್ಲಿ ಒಂದು ಇರಬಹುದು ಅಥವಾ ಎದುರು ಬದರಾಗಿಯಾದರೂ ಇರಬಹುದಾಗಿದೆ.

ತ್ರೈಪುರುಷ ದೇವಾಲಯಗಳಲ್ಲಿ ಒಂದೇ ಗರ್ಭಗೃಹವಿದ್ದು ಒಂದೇ ಪೀಠದ ಮೇಲೆ ಮೂರು ಲಿಂಗಗಳು ಇರುತ್ತವೆ ಅವುಗಳನ್ನು ಬ್ರಹ್ಮ, ವಿಷ್ಣು, ಮಹೇಶ್ವರ ಎಂದು ಕರೆಯುವುದುಂಟು ತ್ರೈಪುರುಷ ದೇವಾಲಯಗಳು ಅಗಹಾರಗಳಿರುವ ಸ್ಥಳಗಳಲ್ಲಿ ಘಟಿಕಾಸ್ಥಳಗಳಿಗೆ ಹೊಂದಿಕೊಂಡೆ ನಿರ್ಮಾಣವಾಗಿರುವುದುಂಟು. ಇಂತಹ ತ್ರಿಕೂಟಾಚಲ ಹಾಗೂ ತ್ರೈಪುರುಷ ದೇವಾಲಯಗಳನ್ನು ಈ ಲೇಖನದ ಮೂಲಕ ಪರಿಚಯಿಸಲಾಗಿದೆ.

ವಿಜಾಪುರ ಜಿಲ್ಲೆಯು ಸುಂದರವಾದ ದೇವಾಲಯಗಳಿಂದ ಕಂಗೊಳಿಸುವ ಕಲಾಕೇಂದ್ರವಾಗಿದೆ. ಈ ಜಿಲ್ಲೆಯಲ್ಲಿ ಒಂದಕ್ಕಿಂದ ಹೆಚ್ಚು ಗರ್ಭಗೃಹಗಳನ್ನು ಒಳಗೊಂಡಿರುವ ಹಲವಾರು ದೇವಾಲಯಗಳು ಕಂಡುಬರುತ್ತವೆ. ಅವುಗಳಲ್ಲಿ ಮೂರು ಗರ್ಭಗೃಹಗಳನ್ನು ಹೊಂದಿರುವ ದೇವಾಲಯಗಳು ಕರ್ನಾಟಕದ ವಿವಿಧ ಭಾಗಗಳಲ್ಲಿ ನಿರ್ಮಾಣಗೊಂಡಿರುವುದು ಕಂಡುಬರುತ್ತವೆ. ದೇವಾಲಯ ವಾಸ್ತುಶಿಲ್ಪಕಲೆಯ ಕ್ಷೇತ್ರದಲ್ಲಿ ಮಹತ್ತರವಾದ ಪ್ರಯೋಗಗಳನ್ನು ಮಾಡುತ್ತಿದ್ದ ಶ್ರೇಯಸ್ಸು ಬಾದಾಮಿಯ ಚಾಲುಕ್ಯರಿಗೆ ಸಲ್ಲುತ್ತದೆ. ಈ ಚಾಲುಕ್ಯ ದೊರೆಗಳು ಬೃಹತ್ ಬಂಡೆಗಲ್ಲುಗಳನ್ನು ಕೊರೆದು ಗುಹಾಲಯಗಳನ್ನು ನಿರ್ಮಿಸುವ ಕಲೆಯನ್ನು ಕರಗತ ಮಾಡಿಕೊಂಡಿರುವುದು ಒಂದೆಡೆಯಾದರೆ; ಒಂದೇ ಜಗತಿಯ ಮೇಲೆ ಒಂದಕ್ಕಿಂತ ಹೆಚ್ಚು ಗರ್ಭಗೃಹಗಳನ್ನು ನಿರ್ಮಿಸುವ ಪರಂಪರೆಯನ್ನು ಬೆಳೆಸಿಕೊಂಡು ಬಂದಿರುವುದು ಮತ್ತೊಂದು ಕಡೆ. ಇಂತಹ ಕಲಾರಂಗದಲ್ಲಿ ವಿಭಿನ್ನ ಪ್ರಕಾರಗಳನ್ನು ಕೊಡಮಾಡಿದ ಇವರು ಕರ್ನಾಟಕದಲ್ಲಿ ಪ್ರಪ್ರಥಮ ಬಾರಿಗೆ ತ್ರಿಕೂಟ ದೇವಾಲಯಗಳನ್ನು ನಿರ್ಮಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಕ್ರಿ.ಶ. 699ರಲ್ಲಿ ಚಾಲುಕ್ಯ ಅರಸ ವಿಜಯಾದಿತ್ಯನ ತಾಯಿಯಾದ ವಿನಯವತಿಯು ಬಾದಾಮಿಯಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರಿಗಾಗಿ ಮೂರು ಗರ್ಭಗೃಹಗಳನ್ನೊಳಗೊಂಡು ದೇವಾಲಯವನ್ನು ನಿರ್ಮಿಸದಳು ಅದುವೆ ಜಂಬುಲಿಂಗ ದೇವಾಲಯ. ಇದು ಕರ್ನಾಟಕದ ಮೊದಲ ತ್ರಿಕೂಟ ದೇವಾಲಯವಾಗಿದೆ. ಚಾಲುಕ್ಯರ ಕಲೆಯಿಂದ ಪ್ರಭಾವಿತರಾದ ರಾಷ್ಟ್ರಕೂಟರು, ತಮ್ಮ ತಮ್ಮ ಕಲಾಭಿರುಚಿಗೆ ಅನುಗುಣವಾಗಿ ದ್ವಿಕೂಟ ಹಾಗೂ ತ್ರಿಕೂಟ ದೇವಾಲಯಗಳನ್ನು ನಿರ್ಮಾಣ ಮಾಡಲಾರಂಭಿಸಿದರು, ಅದರಂತೆ ಕಲ್ಯಾಣ ಚಾಲುಕ್ಯರು ತಮ್ಮ ವಂಶಜರ ಪರಂಪರೆಯನ್ನೇ ಮುಂದುವರೆಸಿಕೊಂಡು ಬರುತ್ತಾ ಅರಸಿಬೀದಿಯಲ್ಲಿ ತ್ರಿಕೂಟಾಚಲ ದೇವಾಲಯಗಳನ್ನು ನಿರ್ಮಿಸಿದರೆ, ಹೊಯ್ಸಳರ ಕಾಲದಲ್ಲಿ ಪಂಚಕೂಟದವರೆಗೂ ದೇಲಯಗಳನ್ನು ನಿರ್ಮಾಣಮಾಡಿ ಕಲಾರಂಗವನ್ನು ಶ್ರೀಮಂತವಾಗಿಸಿದರು. ಬಾದಾಮಿಯ ಚಾಲುಕ್ಯರಿಂದ ಆರಂಭಗೊಂಡ ಈ ತ್ರಿಕೂಟಾಚಲ ದೇವಾಲಯಗಳು ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲಿಯೂ ನಿರ್ಮಾಣಗೊಂಡಿವೆ. ಅಂತಹ ತ್ರಿಕೂಟಾಚಲ ದೇವಾಲಯಗಳು ಬಿಜಾಪುರ ಜಿಲ್ಲೆಯಲ್ಲಿಯೂ ನಿರ್ಮಾಣಗೊಂಡಿವೆ ಅವುಗಳ ಪರಿಚಯವನ್ನು ಈ ಲೇಖನದ ಮೂಲಕ ದೇಶದ ಜನರಿಗೆ ತಿಳಿಸಲು ಪ್ರಯತ್ನಿಸಲಾಗಿದೆ. ಬಿಜಾಪುರ ಜಿಲ್ಲೆಯಲ್ಲಿ ಹಲವಾರು ತ್ರೀಕೂಟ ದೇವಾಲಯಗಳಿದ್ದು, ಅವುಗಳಲ್ಲಿ ಪ್ರಮುಖವಾದವುಗಳು–

ಬಿಜಾಪುರ ಜಿಲ್ಲೆಯ ಇಂಡಿ ತಾಲೂಕಿನಲ್ಲಿರುವ ಅಗರಖೇಡದ ಶಂಕರಲಿಂಗ ದೇವಾಲಯ. ಉಮರಜಿಯ ಈಶ್ವರ ದೇವಾಲಯ, ಚಿಕ್ಕಮಣ್ಣೂರಿನ ಸಂಗಮೇಶ್ವರ ದೇವಾಲಯ., ಮಿರಗಿಯ ಸಂಗಮೇಶ್ವರ ದೇವಾಲಯ, ಹಿರೆಬೇವನೂರಿನ ಮಲ್ಲಿಕಾರ್ಜುನ ದೇವಾಲಯ. ಸಾಲೋಟಗಿಯ ತ್ರೈಪುರುಷ ದೇವಾಲಯ., ಧೂಳಖೇಡದ ಶಂಕರಲಿಂಗ ದೇವಾಲಯ ಸಿಂದಗಿ ತಾಲೂಕಿನಲ್ಲಿರುವ ಕಡ್ಲೆವಾಡದ ಈಶ್ವರ ದೇವಾಲಯ ಮತ್ತು ಸೋಮನಾಥ ದೇವಾಲಯ., ದೇವರನಾವದಗಿಯ ಮಲ್ಲಿಕಾರ್ಜುನ ದೇವಾಲಯ., ಬೆಸಕೇದಗಿಯ ಮಹಾದೇವ ದೇವಾಲಯ., ಮಲಗಾಣದ ಬಸವಣ್ಣ ದೇವಾಲಯ, ಸಿರಸಗಿಯ ಈಶ್ವರ ದೇವಾಲಯ, ಯರಗಲ್‌ದ ರಾಮೇಶ್ವರ ದೇವಾಲಯ. ಮುದ್ದೇಬಿಹಾಳ ತಾಲೂಕಿನ ಕುಂಟೋಜಿಯ ಈಶ್ವರ ದೇವಾಲಯ., ತಾಳಿಕೋಟಿಯ ರಾಮದೇವರ ದೇವಾಲಯ., ಬಸರಕೋಡದ ಈಶ್ವರ ದೇವಾಲಯ ಮತ್ತು ಮೂರುಲಿಂಗದ ದೇವಾಲಯ. ಹಂದರಗಲದ ಸಂಗಮೇಶ್ವರ ದೇವಾಲಯ, ಹಡಗಲಿಯ ಈಶ್ವರ ದೇವಾಲಯ, ಹಗರಗಂಡಗಿಯ ಈಶ್ವರ ದೇವಾಲಯ. ಬಸವನ ಭಾಗೇವಾಡಿ ತಾಲೂಕಿನ ಇಂಗಳೇಶ್ವರದ ಸೋಮನಾಥ ದೇವಾಲಯ. ಕಲ್ಲೇಶ್ವರ ದೇವಾಲಯ, ನಾರಾಯಣ ದೇವಾಲಯ. ಬಸವನ ಬಾಗೇವಾಡಿಯ ಬಸವೇಶ್ವರ ದೇವಾಲಯ. ಈಶ್ವರ ದೇವಾಲಯ. ಸಾಲವಾಡಗಿಯ ಹೊರಯವೇಶ್ವರ ದೇವಾಲಯ. ಇಟಗಿಯ ರಾಮಲಿಂಗೇಶ್ವರ ದೇವಾಲಯ. ವಿಜಾಪುರ ತಾಲೂಕಿನ ರತ್ನಳ್ಳಿಯ ಮಲ್ಲಿಕಾರ್ಜುನ ದೇವಾಲಯ, ಬಬಲೇಶ್ವರದ ಸಂಗಮೇಶ್ವರ ದೇವಾಲಯ. ಮುಂತಾದವುಗಳಾಗಿವೆ.

ಅಗರಖೇಡದ ಶಂಕರಲಿಂಗ ದೇವಾಲಯವು ಗ್ರಾಮದ ದಕ್ಷಿಣ ಭಾಗದಲ್ಲಿ ಅಗ್ನಿಶಿಲೆಯಲ್ಲಿ ನಿರ್ಮಾಣಗೊಂಡಿರುವ ಈ ದೇವಾಲಯವು ಪೂರ್ವಾಭಿಮುಖವಾಗಿ ನಿರ್ಮಾಣಗೊಂಡಿದೆ. ಅಲ್ಲಿರುವ ಕ್ರಿ.ಶ. 1170 ರ ಕಾಲದಲ್ಲಿ ರಚಿಸಲಾಗಿರುವ

ಶಾಸನದ ಆಧಾರದ ಮೇಲೆ ಈ ದೇವಾಲಯವನ್ನು ಕೈಲಾಸನಾಥ ದೇವಾಲಯವೆಂದು ಉಲ್ಲೇಖಿಸಿದೆ. ಉಮರಜಿಯಲ್ಲಿರುವ ಈಶ್ವರ ದೇವಾಲಯವು ಸಹ ಪೂರ್ವಾಭಿಮುಖವಾಗಿ ಎತ್ತರವಾದ ಜಗತಿಯ ಮೇಲೆ ನಿರ್ಮಿಸಲಾಗಿದೆ. ಅದರಂತೆಯೇ ಚಿಕ್ಕಮಣ್ಣೂರಿನ ಸಂಗಮೇಶ್ವರ ದೇವಾಲಯ ಮತ್ತೊಂದು ತ್ರಿಕೂಟಾಚಲ ದೇವಾಲಯವಾಗಿದ್ದು; ಶಾಸನಗಳಲ್ಲಿ ಮನಿಯೂರು ಎಂದು ಕರೆಯಲ್ಪಟ್ಟಿರುವ ಈ ಗ್ರಾಮದ ಸ್ವಯಂಭು ಭೀಮೇಶ್ವರ ದೇವಾಲಯಕ್ಕೆ ಕ್ರಿ.ಶ.1134ರಲ್ಲಿ ಗ್ರಾಮದ ಗಾವುಂಡರು ಸೇರಿ ಭೂದಾನವನ್ನು ನೀಡಿದ ವಿವರವಿದೆ ಅದರಂತೆ ಮಿರಗಿ ಗ್ರಾಮದ ಸಂಗಮೇಶ್ವರ ದೇವಾಲಯ, ಹಿರೇಬೇವನೂರಿನ ಮಲ್ಲಿಕಾರ್ಜುನ ದೇವಾಲಯ. ಹಿರೇಬೇವನೂರು ಗ್ರಾಮವು ಚಾಲುಕ್ಯರ ಕಾಲದಲ್ಲಿ 13 ಹಳ್ಳಿಗಳ ಆಡಳಿತ ಕೇಂದ್ರವೂ ಆಗಿತ್ತು. ಇಲ್ಲಿರುವ 13ನೇ ಶತಮಾನದ ಒಂದು ಶಾಸನವು ಭೋಗನಾಥ, ರೇವಣಸಿದ್ಧ, ಮಲ್ಲಿಕಾರ್ಜುನ, ರಾಮೇಶ್ವರ, ಮೈಲಾರದೇವ ಮತ್ತು ಬ್ರಹ್ಮೇಶ್ವರ ದೇವಾಲಯಗಳಿದ್ದವು ಎಂಬುದರ ಉಲ್ಲೇಖಗಳಿವೆ. ಪ್ರಸ್ತುತ ಭೋಗಲಿಂಗೇಶ್ವರ ಮತ್ತು ಮಲ್ಲಿಕಾರ್ಜುನ ದೇವಾಲಯಗಳು ಮಾತ್ರ ಕಾಣಸಿಗುತ್ತವೆ.

ಸಿಂದಗಿ ತಾಲೂಕಿನ ಕಡ್ಲೇವಾಡ ಗ್ರಾಮದಲ್ಲಿ ಕ್ರಿ.ಶ. 1172 ರಲ್ಲಿ ನಿರ್ಮಾಣಗೊಂಡಿರುವ ಈಶ್ವರ ದೇವಾಲಯವು ತ್ರಿಕೂಟಾಚಲ ದೇವಾಲಯವಾಗಿದ್ದು ಕಲಚೂರಿ ಸೋವಿದೇವನ ಆಳ್ವಿಕೆಯ ಕಾಲದಲ್ಲಿ ಸೋಮರಾಶಿ ಪಂಡಿತರ ಮಗ ಸೋಮನಾಥ ಮತ್ತು ಪ್ರಾಸಾದ ಸೂತ್ರಧಾರಿ ಸಂಗೋಜರು ಕೂಡಿಕೊಂಡು ಈ ದೇವಾಲಯವನ್ನು ನಿರ್ಮಿಸಿದ್ದಾರೆ ಎಂಬುದು ಅಲ್ಲಿಯ ಶಾಸನದಿಂದ ತಿಳಿದುಬರುವುದು.

ದೇವರನಾವದಗಿ ಗ್ರಾಮದಲ್ಲಿರುವ ಮಲ್ಲಿಕಾರ್ಜುನ ದೇವಾಲಯವು ತ್ರಿಕೂಟಾಚಲವಾಗಿದ್ದು ದಕ್ಷಿಣಾಭಿಮುಖವಾಗಿ ನಿರ್ಮಿತವಾಗಿದೆ. ಈ ದೇವಾಲಯದಲ್ಲಿರುವ ಕ್ರಿ.ಶ.1140 ರ ಶಾಸನದಲ್ಲಿ ಎಳಮೇಲನಾಡು-30 ರ ಮನ್ನೆಯ ಮಹಾಮಂಡಳೇಶ್ವರ ಸೋವಿದೇವರಸನು ಪೆರ್ಗಡೆ ದಾವರಾಜನ ವಿನಂತಿಯ ಮೇರೆಗೆ ಮೂಲಸ್ಥಾನ ಮಲ್ಲಿಕಾರ್ಜುನ ದೇವಾಲಯಕ್ಕೆ ಭೂದಾನ ನೀಡಿದ ಉಲ್ಲೇಖವಿದೆ. ಕೂಟಮಾದರಿಯಲ್ಲಿರುವ ಹೊರಗೋಡೆ ಹಿಂಸರಿತ, ಮುಂಸರಿತಗಳಿಂದ ಕೂಡಿದೆ. ಮುಂಸರಿತದಲ್ಲಿ ಅಲಂಕೃತ ಚೌಕಾಕಾರದ ಕಂಬಗಳಿದ್ದರೆ, ಹಿಂಸರಿತದಲ್ಲಿ ಶಿಲಾಬಾಲಿಕೆಯರು ಮತ್ತು ಚಾಮರಧಾರೆಯರ ಶಿಲ್ಪಗಳಿವೆ.

ಬೆನಕೋಟಗಿ ಗ್ರಾಮದಲ್ಲಿ ಕಲ್ಯಾಣ ಚಾಲುಕ್ಯ ಶೈಲಿಯಲ್ಲಿ ನಿರ್ಮಾಣಗೊಂಡ ಮಹಾದೇವ ದೇವಾಲಯ. ಈ ದೇವಾಲಯವು ಗ್ರಾಮದ ಪೂರ್ವಕ್ಕೆ ಮುಖಮಾಡಿ ನಿರ್ಮಾಣಗೊಂಡಿದೆ. ಶಾಸನದಲ್ಲಿ ಈ ಗ್ರಾಮವನ್ನು ಬೆನಕವಿಟ್ಟಿಗೆ ಎಂದು ಉಲ್ಲೇಖಿತವಾಗಿದೆ. ಕ್ರಿ.ಶ. 1040ರ ಶಾಸನದಲ್ಲಿ ಇಲ್ಲಿರುವ ಮೂಲಸ್ಥಾನ ಮಹಾದೇವ ದೇವಾಲಯಕ್ಕೆ ಪೆರ್ಗಡೆ ಮೇಲಯ್ಯ ಎಂಬವನು ವಿವಿಧ ರೀತಿಯ ದಾನಗಳನ್ನು ನೀಡಿದ ಉಲ್ಲೇಖವಿದೆ.

ಶಿರಸಗಿಯ ಈಶ್ವರ ದೇವಾಲಯ. ಈ ದೇವಾಲಯದಲ್ಲಿರುವ ಶಾಸನದಲ್ಲಿ ಗ್ರಾಮವನ್ನು ಸರ್ವನಮಸ್ಯ ಅಗ್ರಹಾರ ಸಿರಸಿದ್ದೆ ಎಂದು ಕರೆಯಲಾಗಿದೆ. ಮೂಲ ವಿಜಯಪುರದ ಕೇದಾರೇಶ್ವರ ದೇವರಿಗೆ ಮುಖ ಹಾಗೂ ದೇವಕಾರ್ಯಕ್ಕೆ ಇಲ್ಲಿಯ ಅಗ್ರಹಾರದ ವಿದ್ವಾಂಸರಿಗೆ ಮಹಾಮಂಡಳೇಶ್ವರ ಸಾವಿದೇವ ಸಮಸ್ತ ಪ್ರಜೆಗಳ ಸಮ್ಮುಖದಲ್ಲಿ ದಾನ ಮಾಡಿದನೆಂಬ ಉಲ್ಲೇಖವಿದೆ.

ತಾಳಿಕೋಟೆ ಮುದ್ದೇಬಿಹಾಳ ತಾಲೂಕಿನಲ್ಲಿರುವ ಒಂದು ಐತಿಹಾಸಿಕ ಕೇಂದ್ರ. ಈ ಗ್ರಾಮದ ಪಶ್ಚಿಮಕ್ಕೆ ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿರುವ ರಾಮದೇವರ ದೇವಾಲಯ ಕಂಡುಬರುವುದು. ತ್ರಿಕೂಟಾಚಲವಾಗಿರುವ ಈ ದೇವಾಲಯವು ಪೂರ್ವಾಭಿಮುಖವಾಗಿ ನಿರ್ಮಾಣಗೊಂಡಿದೆ. ಪ್ರಸ್ತುತ ದೇವಾಲಯದಲ್ಲಿರುವ ಕ್ರಿ.ಶ.1181 ರ ಶಾಸನದಲ್ಲಿ ರಾಜಾಧಿಕಾರಿ ದಂಡನಾಯಕ ಪದ್ಮರಸನು ಮಹಾಪ್ರಧಾನ ಲಕ್ಷ್ಮಿದೇವರಸನ ಅನುಮತಿಯಿಂದ ಹಗರಟ್ಟಿಗೆ-300 ನಾಡಿನಲ್ಲಿ ಪ್ರತಿ ಹಳ್ಳಿಯಿಂದ ಒಂದು ಹೊನ್ನಕೊಡಿಸಿ ತಾಳಿಕೋಟೆಯ ಸೋಮನಾಥ ದೇವರಿಗೆ ದಾನ ನೀಡಿದ ಉಲ್ಲೇಖವಿದೆ. ಸಭಾಮಂಟಪದ ಕಂಬದ ಮೇಲಿರುವ ಕ್ರಿ.ಶ.1225 ರ ಶಾಸನದಲ್ಲಿ ಮಹಾಮಂಡಳಿಕ ಮಗರಮುರಾರಿ ಜೈತಪಾಳನಾಯಕ ಮತ್ತು ಮಾಣಿಕಾದೇವಿಯರಿಂದ ಇದೇ ದೇವಾಲಯಕ್ಕೆ ಭೂದಾನ ಬಿಡಲಾಗಿದೆ. ಶಾಸನಗಳ ಉಲ್ಲೇಖದಂತೆ ಇದು ಮೂಲ ಸೋಮನಾಥ ದೇವಾಲಯವೆಂಬುದು ಸ್ಪಷ್ಟವಾಗುತ್ತದೆ. ಕೋಟೆಯ ದ್ವಾರದಲ್ಲಿರುವ ಕ್ರಿ.ಶ.1184 ಶಾಸನವೀರಬ್ಯಾರೇಶ್ವರ ದೇವಾಲಯ ಮಠ ಗಣಮಠಗಳನ್ನು ಉಲ್ಲೇಖಿಸುತ್ತದೆ. ವಿರೂಪದೇವರಸನು ಮಾಡಿದ ಪ್ರತಿಯೊಂದು ಗ್ರಾಮಸ್ಥರಿಂದ ಒಂದೊಂದು ಗದ್ಯಾಣವನ್ನು ಕೂಡಿಹಾಕಿ ದಾನ ನೀಡಿದ್ದಾನೆ. ಆದರೆ ಶಾಸನೋಕ್ತ ದೇವಾಲಯ ಹಾಗೂ ಮಠಗಳು ಗ್ರಾಮದಲ್ಲಿ ಪ್ರಸ್ತುತವಾಗಿ ಕಂಡುಬರುವುದಿಲ್ಲ. ಕುಂಟೋಜಿ ಗ್ರಾಮದಲ್ಲಿರುವ ಈಶ್ವರ ದೇವಾಲಯ, ಬಸರಕೋಡದಲ್ಲಿರುವ ಈಶ್ವರ ದೇವಾಲಯವು ಇದೇ ಗ್ರಾಮದ ಮೂರುಲಿಂಗದ ದೇವಾಲಯ. ಹಗರಗಂಡಗಿಯ ಈಶ್ವರ ದೇವಾಲಯ.

ಪಂದರಗಲ್ ಸಂಗಮೇಶ್ವರ ದೇವಾಲಯ. ತಾಲೂಕಿನಲ್ಲಿರುವ ತ್ರಿಕೂಟಾಚಲ ದೇವಾಲಯಗಳಾಗಿವೆ.

ಪಂದರಗಲ್‌ದ ದೇವಾಲಯದ ಶಾಸನವು ತೇದಿಯಿಲ್ಲದ ಶಾಸನವಾಗಿದ್ದು ಹೊಂಡರಸನ ಸಹೋದರ ಬಮ್ಮರಸ ಹಾಗೂ ಆತನ ಪತ್ನಿ ಬಾಗಿಯಬ್ಬರಸಿಯರು ತ್ರಿಕೂಟ ದೇವಾಲಯವನ್ನು ನಿರ್ಮಿಸಿ ಭೂದಾನ ಮಾಡಿದ ವಿವರವಿದೆ. ಅಲ್ಲಿಯೇ ಇರುವ ಮತ್ತೊಂದು ತೃಟಿತಗೊಂಡ ಶಾಸನದಲ್ಲಿ ಸ್ವಯಂಭು ತೊಂಡೇಶ್ವರ ದೇವರಿಗೆ ಹಾಗೂ ಮಠದ ಆಚಾರ್ಯ ಸರ್ವೇಶ್ವರ ಪಂಡಿತರಿಗೆ ದಾನಕೊಟ್ಟ ವಿವರವಿದೆ. ಇದು ಸು.12ನೇ ಶತಮಾನದ ಶಾಸನ ಯುದ್ಧದಲ್ಲಿ ವೀರನೊಬ್ಬನ ಮರಣ ಮತ್ತು ತಂತ್ರಪಾಳನನ್ನು ಹೆಸರಿಸುತ್ತದೆ.

ಬಾಗೇವಾಡಿ ತಾಲೂಕಿನ ಇಂಗಳೇಶ್ವರ ಗ್ರಾಮವು ಪ್ರಾಗೈತಿಹಾಸಿಕ ನೆಲೆಯಾಗಿತ್ತು. ಶಾಸನಗಳಲ್ಲಿ ತರ್ದವಾಡಿ-1000, ದ ಪಿರಿಯ ಪಟ್ಟಣವಾಗಿತ್ತು. ಇದನ್ನು ಇಂಗಳೇಶ್ವರ, ಇಂಗುಳೇಶ್ವರ ಮತ್ತು ಅಗ್ರಹಾರ ಇಂಗಳೇಶ್ವರ ಎಂದು ಉಲ್ಲೇಖಿತವಾಗಿದೆ. ಇಲ್ಲಿರುವ ಕಲ್ಮೇಶ್ವರ ದೇವಾಲಯವು ಅಗ್ನಿಶಿಲೆಯಲ್ಲಿ ನಿಮಾಣಗೊಂಡಿರುವ ದೇವಾಲಯವಾಗಿದೆ. ಇದೇ ಗ್ರಾಮದ ಮಧ್ಯದಲ್ಲಿ ಸೋಮನಾಥ ದೇವಾಲಯದಲ್ಲಿ ಕ್ರಿ.ಶ. 1176 ರ ಅವಧಿಯಲ್ಲಿ ಹೊರಡಿಸಲಾದ ಶಾಸನದಲ್ಲಿ ವಾಜಿಕುಲದ ಹೀಳಸೋವರಸನಿಂದ ನಿರ್ಮಾಣಗೊಂಡ ಸೋಮನಾಥ ದೇವಾಲಯಕ್ಕೆ ಕಲಚುರಿಯ ಸೋವಿದೇವನು ಅಗಸಬಾಳ ಗ್ರಾಮವನ್ನು ದಾನ ಮಾಡಿದ ವಿವರವಿದೆ.

**ಇದೇ** ಗ್ರಾಮದ ಒಳಭಾಗದಲ್ಲಿರುವ ನಾರಾಯಣ ದೇವಾಲಯ ಇದು ಪೂರ್ವಾಭಿಮುಖವಾಗಿದ್ದು ಅಗ್ನಿಶಿಲೆಯಲ್ಲಿ ನಿರ್ಮಾಣವಾಗಿರುವ ತ್ರಿಕೂಟಾಚಲ ದೇವಾಲಯವಾಗಿದೆ. ದೇವಾಲಯದ ಪೂರ್ವ ಭಾಗದ ಭಿತ್ತಿಯ ಮೇಲೆ ಯಾದವ ದೊರೆಯಾದ ಮಹಾದೇವ ಎಂಬವನ ಕಾಲದಲ್ಲಿ ರಚಿತವಾಗಿರುವ ಕ್ರಿ.ಶ.1224 ರ ಶಾಸನದಲ್ಲಿ ಊರಡಗೇರಿಯ ಗೋಪಿನಾಥ ದೇವಾಲಯಕ್ಕೆ ಇಂಗಳೇಶ್ವರದ ಮಹಾಜನರಿಂದ ಭೂಮಿ, ಗಾಣ ಮತ್ತು ಅಂಗಡಿಯನ್ನು ದಾನಕೊಟ್ಟಿರುವ ಮಾಹಿತಿಯನ್ನು ಒಳಗೊಂಡಿದೆ. ಆದರೆ ಸ್ಥಳಿಯರಿಂದ ಈ ದೇವಾಲಯವು ನಾರಾಯಣ ದೇವಾಲಯವೆಂದೆ ಕರೆಯಲ್ಪಡುತ್ತದೆ.

ತಾಲೂಕಾ ಕೇಂದ್ರವಾಗಿದ್ದ ಬಾಗೇವಾಡಿಯು ತರ್ದವಾಡಿ ಮಧ್ಯದ ಪ್ರದೇಶ ಎಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಇದನ್ನು ತಿಂಗಳೇಶ್ವರ ಬಾಗವಾಡಿ, ಇಂಗಳೇಶ್ವರ ಬಾಗವಾಡಿ ಎಂತಲೂ ಕರೆಯುವರು. ಇಲ್ಲಿರುವ ಬಸವೇಶ್ವರ ದೇವಾಲಯವು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಿಸಲಾಗಿದ್ದು ಅಲ್ಲಿರುವ 1049 ರ ಶಾಸನವು ಒಂದನೆಯ ಸೋಮೇಶ್ವರನ ಮಡದಿ ಮೈಳಲದೇವಿಯು ಸೋಮನಾಥ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಮತ್ತು ಇತರ ಕಾರ್ಯಗಳಿಗಾಗಿ ಹೊನವಾಡ ಗ್ರಾಮವನ್ನು ದಾನ ಮಾಡಿರುವ ವಿವರವನ್ನು ಉಲ್ಲೇಖಿಸುತ್ತದೆ. ಅಲ್ಲಿಯೇ ಇರುವ ಮತ್ತೊಂದು ಕ್ರಿ.ಶ.1170 ರ ಕಲಚೂರಿ ಅರಸ ಸೋವಿದೇವನ ಕಾಲದ ಶಾಸನವು ರೇವಣಯ್ಯನಾಯಕನಿಂದ ನಿರ್ಮಿಸಲಾದ ಸೋಮನಾಥ, ಚನ್ನಕೇಶವ ದೇವಾಲಯಗಳಿಗೆ ಸೋವಲದೇವರಸಿ ಸೇನಭೋವ ಹಾಗೂ 500 ಮಹಜನರಿಂದ ಭೂದಾನ ನೀಡಿರುವ ಮಾಹಿತಿ ದೊರೆಯುವುದು.

ಇದೇ ಗ್ರಾಮದಲ್ಲಿರುವ ಈಶ್ವರ ದೇವಾಲಯ. ಈ ಗ್ರಾಮದಲ್ಲಿರುವ ಕ್ರಿ.ಶ.1169ರ ಶಾಸನದಲ್ಲಿ ಬಾಗೇವಾಡಿಯ ಅಗ್ರಹಾರದ ಮಲ್ಲಿಕಾರ್ಜುನ ದೇವಾಲಯಕ್ಕೆ 500 ಕೊತ್ತಳಿಗಳಿಂದ ಕೆಲವು ಸುಂಕಗಳನ್ನು ದಾನಬಿಟ್ಟ ವಿಷಯವನ್ನು ಕಾಣಬಹುದಾಗಿದೆ. ಈ ದೇವಾಲಯವು ಮೂಲತಃ ಮಲ್ಲಿಕಾರ್ಜುನ ದೇವಾಲಯವೇ ಆಗಿರಬಹುದಾಗಿದೆ.

ಬಸವನ ಬಾಗೇವಾಡಿ ತಾಲೂಕಿನಲ್ಲಿ ಮತ್ತೊಂದು ಕಲೆಯ ಕೇಂದ್ರ ಮುತ್ತಗಿ. ಈ ಗ್ರಾಮದ ಮಧ್ಯದಲ್ಲಿ ಸು.ಕ್ರಿ.ಶ.12ನೇ ಶತಮಾನದಲ್ಲಿ ಕಲ್ಯಾಣ ಚಾಲುಕ್ಯ ಶೈಲಿಯಲ್ಲಿ ನಿರ್ಮಿಸಲಾದ ದೇವಾಲಯವಿದ್ದು ಅದನ್ನು ಸ್ಥಳಿಯವಾಗಿ ಲಕ್ಷ್ಮಿನಾರಾಯಣ ದೇವಾಲಯವೆಂದು ಕರೆಯುವರು. ಪೂರ್ವಾಭಿಮುಖವಾಗಿರುವ ಈ ದೇವಾಲಯವು ಮೊದಲು ದ್ವಿಕೂಟಾಚಲವಾಗಿದ್ದು, ನಂತರದ ಅವಧಿಯಲ್ಲಿ ಮತ್ತೊಂದು ಗರ್ಭಗೃಹವನ್ನು ನಿರ್ಮಿಸಲಾಗಿದೆ. ಈ ಗ್ರಾಮದಲ್ಲಿರುವ ಕ್ರಿ.ಶ.1189ರ ಶಾಸನದಲ್ಲಿ ಶಂಕರಸ್ವಾಮಿ ಅಜ್ಜ ಚೌಡಿಶೆಟ್ಟಿ ಲಕ್ಷ್ಮಿನರಸಿಂಹ ದೇವಾಲಯವನ್ನು ನಿರ್ಮಾಣಮಾಡಿದನೆಂಬ ಉಲ್ಲೇಖವಿದೆ.[19] ಇದಕ್ಕೆ ಪಟ್ಟಸಾಹಣಾಧಿಪತಿ ಪೇಯ್ಯ ಹಾಗೂ ಭಿಲ್ಲಮ ಅರಸರು ಕೂಡಿ ಬಿವವೂರು ಗ್ರಾಮವನ್ನು ದಾನ ನೀಡಿದ ವಿವರವಿದೆ.

ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಸಾಲವಾಡಗಿ ರಾಷ್ಟ್ರಕೂಟರ ಈ ಗ್ರಾಮದ ಅಗಸೆ ಭಾಗಿಲದ ಬಳಿ ದೊರೆತಿರುವ ರಾಷ್ಟ್ರಕೂಟರ ದೊರೆ ಮೂರನೆಯ ಕೃಷ್ಣನು ಹೊರಡಿಸಿರುವ ಶಾಸನದಲ್ಲಿ ಕೃಷ್ಣನು ಹೊರೆಯಮೇಶ್ವರ ದೇವಾಲಯವನ್ನು ನಿರ್ಮಿಸಿದನು ಎಂಬ ಉಲ್ಲೇಖವಿದೆ. ಇದೇ ದೇವಾಲಯವನ್ನು ಚಾಲುಕ್ಯ ದೊರೆಯಾದ ಎರಡನೆಯ ಜಗದೇಕಮಲ್ಲನ ಆಳ್ವಿಕೆಯ ಅವಧಿಯಲ್ಲಿ ಕಾಶ್ಮೀರಬ್ರತಿ ಮೂರುಜಾವಿ ಮುನಿಪುನರ್

ನಿರ್ಮಾಣ ಮಾಡಿ ಪಾಪವಿನಾಶ ಮತ್ತು ಸಿದ್ಧೇಶ್ವರ ಎಂಬ ಹೆಸರಿನಿಂದ ನಾಮಕರಣ ಮಾಡಿದನು ಮತ್ತು ಇದರ ಮೇಲ್ವಿಚಾರಣೆಗಾಗಿ ಮೂಲಿಗ ಮಾಕಯ್ಯನ ಮಗಳಾದ ಅಚ್ಚಿಕಬ್ಬೆಯು ಜಗದೇಕಮಲ್ಲನ ಮನೆವರ್ಗಡೆ ದಂಡನಾಯಕ ಬರ್ಮಯ್ಯನಿಗೆ ಭೂಮಿಯನ್ನು ಪಾರಮೇಶ್ವರ ದತ್ತಿಯಾಗಿ ಬಿಟ್ಟಿದ್ದಾಳೆ. ಸುತ್ತಲೂ ಮನೆಗಳಿಂದಾವೃತವಾದ ಈ ದೇವಾಲಯವು ಗುಹೆಯಂತೆ ಗೋಚರವಾಗುತ್ತದೆ.

ಬಿಜಾಪುರ ತಾಲೂಕಿನ ಡೋಣಿ ನದಿ ತೀರದ ಮೇಲಿರುವ ಕತ್ನಳ್ಳಿ ಗ್ರಾಮವು ಶಾಸನದಲ್ಲಿ ಅಗ್ರಹಾರ ಕಟನಹಳ್ಳಿ ಎಂದು ಉಲ್ಲೇಖಿಸಲಾಗಿದೆ. ಇಲ್ಲಿರುವ ಮಲ್ಲಿಕಾರ್ಜುನ ದೇವಾಲಯ ತ್ರಿಕೂಟಾಚಲವಾಗಿದೆ. ಕ್ರಿ.ಶ.1139ರ ಶಾಸನದ ಪ್ರಕಾರ ಗ್ರಾಮದ ಮಲ್ಲಿಕಾರ್ಜುನ ದೇವರಿಗೆ ತಾರ್ಕಿಕ ಚೂಡಾಮಣಿ ಕೇಶವ ಮತ್ತು ಮಾಧವ ಪಂಡಿತರು ಭೂದಾನ ನೀಡಿದ ವಿವರವಿದೆ. ಮತ್ತೊಂದು ತ್ರಿಕೂಟಾಚಲ ದೇವಾಲಯ ಬಬಲೇಶ್ವರ ಗ್ರಾಮದ ಈ ಸಂಗಮೇಶ್ವರ ದೇವಾಲಯ.

ಈ ಮೇಲಿನ ಪ್ರತಿಯೊಂದು ದೇವಾಲಯವೂ ತ್ರಿಕೂಟಾಚಲ ದೇವಾಲಯವಾಗಿದ್ದು, ಮೂರು ಗರ್ಭಗೃಹಗಳನ್ನು, ಅಂತರಾಳ, ಅರ್ಧಮಂಟಪ, ನವರಂಗ ಮಂಟಪಗಳನ್ನು ಹೊಂದಿವೆ. ಪ್ರತಿಯೊಂದು ದೇವಾಲಯವು ಸಾಮಾನ್ಯವಾಗಿ ಪೂರ್ವಾಭಿಮುಖವಾಗಿ ನಿರ್ಮಾಣಗೊಂಡಿರುತ್ತವೆ. ಕೆಲವೊಂದು ಬೇರೆ ಬೇರೆ ದಿಕ್ಕುಗಳತ್ತ ಮುಖಮಾಡಿ ನಿರ್ಮಾಣವಾದ ದೇವಾಲಯಗಳನ್ನು ಕಾಣಬಹುದಾಗಿದೆ. ಉದಾ: ದೇವರ ನಾವದಗಿ ಗ್ರಾಮದ ಮಲ್ಲಿಕಾರ್ಜುನ ದೇವಾಲಯ ಮತ್ತು ಕತ್ನಳ್ಳಿಯ ಮಲ್ಲಿಕಾರ್ಜುನ ದೇವಾಲಯಗಳು ದಕ್ಷಿಣಾಭೀಮುಖವಾಗಿದ್ದರೆ, ಬಸರಕೋಡದಲ್ಲಿರುವ ಈಶ್ವರ ದೇವಾಲಯ ಮತ್ತು ಮೂರು ಲಿಂಗದಗುಡಿಗಳು ಹಾಗೂ ಬಬಲೇಶ್ವರದ ಸಂಗಮೇಶ್ವರ ದೇವಾಲಯಗಳು ಉತ್ತರಾಭಿಮುಖವಾಗಿಯೂ, ಇಂಗಳೇಶ್ವರದ ಸೋಮನಾಥ ದೇವಾಲಯವು ಪಶ್ಚಿಮಾಭಿಮುಖವಾಗಿ ನಿರ್ಮಾಣಗೊಂಡಿವೆ ಕೆಲವು ದೇವಾಲಯಗಳು ಶೈವ ದೇವಾಲಯಗಳಾಗಿದ್ದರೆ ಮತ್ತೆ ಕೆಲವು ದೇವಾಲಯಗಳು ವೈಷ್ಣವ ಧರ್ಮದ ದೇವಾಲಯಗಳಾಗಿವೆ. ಗರ್ಭಗುಡಿಗಳಲ್ಲಿರುವ ಮತ್ತು ದ್ವಾರಬಂಧದ ಪಟ್ಟಿಕೆಯಲ್ಲಿರುವ ದೇವತಾ ಮೂರ್ತಿಗಳ ಆಧಾರದ ಮೇಲೆ ದೇವಾಲಯಗಳು ಯಾವ ಧರ್ಮದ ದೇವಾಲಯಗಳೆಂದು ತಿಳಿಯಬಹುದಾಗಿದೆ ಗರ್ಭಗುಡಿಯಲ್ಲಿರುವ ಲಿಂಗಗಳನ್ನು ವಿಭಿನ್ನ ಹೆಸರುಗಳಿಂದಲೂ ಕರೆಯುವುದುಂಟು. ಉದಾಹರಣೆಗೆ: ಹಿರೇಬೇವಿನೂರಿನ ಮಲ್ಲಿಕಾರ್ಜುನ ದೇವಾಲಯದ ಮೂರು ಗರ್ಭಗೃಹಗಳಲ್ಲಿ ಮೂರು ಯೋನಿವಾಣಿ ಲಿಂಗಗಳಿದ್ದು ಅವುಗಳನ್ನು ಸ್ಥಳೀಯವಾಗಿ ಮಲ್ಲಿಕಾರ್ಜುನ, ರೇವಣಸಿದ್ಧ, ಸಿದ್ಧರಾಮೇಶ್ವರ ಎಂಬ ಹೆಸರುಗಳಿಂದ ಕರೆಯುತ್ತಾರೆ. ಇದೊಂದು ಶೈವ ದೇವಾಲಯವಾಗಿದೆ. ಮಿರಗಿಯ ಸಂಗಮೇಶ್ವರ ಮತ್ತು ಅಗರಖೇಡದ ಶಂಕರಲಿಂಗ ದೇವಾಲಯ, ಯರಗಲ್ಲದ ರಾಮೇಶ್ವರ ದೇವಾಲಯ, ದೇವರನಾವದಗಿಯ ಮಲ್ಲಿಕಾರ್ಜುನ ದೇವಾಲಯ, ಬಸರಕೋಡದ ಈಶ್ವರ ದೇವಾಲಯಗಳಲ್ಲಿ ಮೂರು ಗರ್ಭಗೃಹಗಳಲ್ಲಿ ಯೋನಿಪಾಣಿ ಮತ್ತು ಚೌಕಪಾಣಿ ಲಿಂಗಗಳಿವೆ. ಬೆನಕೋಟಗಿಯ ಮಹಾದೇವ ದೇವಾಲಯದ ಪೂರ್ವದ ಗರ್ಭಗೃಹದಲ್ಲಿ ಲಿಂಗ ವಿದ್ದರೆ, ಉಳಿದ ಗರ್ಭಗೃಹದಲ್ಲಿ ಕೇವಲ ಪೀಠಗಳು ಕಂಡುಬರುತ್ತವೆ. ಆದರೆ ಇಂಗಳೇಶ್ವರದ ನಾರಾಯಣ ದೇವಾಲಯದಲ್ಲಿ ಉತ್ತರ ಗರ್ಭಗೃಹದ ಪೀಠದ ಮೇಲೆ ನಿಂತ ವಿಷ್ಣುವಿನ ಶಿಲ್ಪವಿದ್ದರೆ, ಪಶ್ಚಿಮ ಹಾಗೂ ಪೂರ್ವ ಗರ್ಭಗೃಹದಲ್ಲಿ ಯೋನಿಪಾಣಿ ಲಿಂಗಗಳಿವೆ. ಇದರಿಂದ ಇದೊಂದು ವೈಷ್ಣವ ದೇವಾಲಯವೆನ್ನಬಹುದಾಗಿದೆ. ಅದರಂತೆ ಮುತ್ತಗಿಯ ಲಕ್ಷ್ಮೀನಾರಾಯಣ ದೇವಾಲಯದ ಗರ್ಭಗೃಹಗಳು ಒಂದೇ ಸಾಲಿನಲ್ಲಿ ಪೂರ್ವಕ್ಕೆ ಮುಖಮಾಡಿ ನಿರ್ಮಿತವಾಗಿದೆ. ಪೂರ್ವಗರ್ಭಗೃಹದಲ್ಲಿ ವಿಷ್ಣು ಮತ್ತು ಪಕ್ಕದ ಗರ್ಭಗೃಹದಲ್ಲಿ ಕೋನಾಕಾರದ ಲಿಂಗಪೀಠವಿದೆ.

ದೇವಾಲಯಗಳು ಯಾವ ಧರ್ಮದವುಗಳಾಗಿವೆ ಎಂಬುದನ್ನು ಕೊನೆಯಲ್ಲಿ ಕೊಡಮಾಡಿದ ಪಟ್ಟಿಯಲ್ಲಿ ಕೊಡಲಾಗಿದೆ. ದೇವಾಲಯಗಳನ್ನು ಸ್ಥಳೀಯವಾಗಿ ಹೆಚ್ಚು ದೊರೆಯುತ್ತಿರುವ ಅಗ್ನಿಶಿಲೆಯನ್ನು ಬಳಸಿಕೊಳ್ಳಲಾಗಿದೆ. ಆದರೆ ಹಂದರಗಲ್‌ದ ಸಂಗಮೇಶ್ವರ ದೇವಾಲಯದ ನಿರ್ಮಾಣದಲ್ಲಿ ಕೆಂಪುಕಣಶಿಲೆಯನ್ನು ಬಳಸಲಾಗಿದೆ.

**ತ್ರೈಪುರುಷ ದೇವಾಲಯ :**

ಮಲಘಾಣ ಗ್ರಾಮದಲ್ಲಿರುವ ಬಸವಣ್ಣ ದೇವಾಲಯವು ಸುಮಾರು 11ನೇ ಶತಮಾನದಲ್ಲಿ ನಿರ್ಮಾಣಗೊಂಡಿರುವ ಇದು ಪೂರ್ವಾಭಿಮುಖವಾಗಿದೆ. ಈ ದೇವಾಲಯವು ತ್ರೈಪುರುಷ ದೇವಾಲಯವಾಗಿದ್ದು ಮೂರು ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪಗಳಿಂದ ಕೂಡಿದೆ. ಈ ದೇವಾಲಯದಲ್ಲಿ ಕ್ರಿ.ಶ.1100 ರ ಅವಧಿಯಲ್ಲಿ ಹೊರಡಿಸಲಾದ ಶಾಸನದಲ್ಲಿ ತರ್ದವಾಡಿ ಸಾಸಿರದ ಕುಮ್ಮಡಿ–30ರ ಕಂಪಣ ಮಲ್ಲಗಾಣದಲ್ಲಿ ಆದಿತ್ಯದೇವ ಕೇಶವದೇವ ಮತ್ತು ರಾಮೇಶ್ವರದೇವರಿಗೆ ದಂಡನಾಯಕ ಮಾದೇವಯ್ಯ ಬಿಟ್ಟ ದತ್ತಿಯ ಉಲ್ಲೇಖವಿದೆ. ಇದೊಂದು ಶೈವ ಮತ್ತು ವೈಷ್ಣವ ಧರ್ಮಗಳ ಮಿಶ್ರಣ ದೇವಾಲಯವಾಗಿದೆ. ಗರ್ಭಗೃಹಗಳ ದ್ವಾರದಲ್ಲಿ ಶೈವ ವೈಷ್ಣವ ದ್ವಾರಪಾಲಕರ ಶಿಲ್ಪಗಳು

ಇದಕ್ಕೆ ಪೂರಕವಾಗಿವೆ. ಕ್ರಿ.ಶ. 1101 ರಲ್ಲಿ ಇದೇ ದೇವಾಲಯಕ್ಕೆ ಊರೊಡೆಯನು ದಿವಾಕರ ಭಟ್ಟೋಪಾಧ್ಯಾಯನಿಂದ ಭೂಮಿ ಮತ್ತು ನಿವೇಶನವನ್ನು ದಾನಮಾಡಿದ ಉಲ್ಲೇಖವಿದೆ.

ದಕ್ಷಿಣ ಗರ್ಭಗೃಹದ ಪ್ರವೇಶದ್ವಾರಕ್ಕೆ ಅರ್ಧಗಂಬ. ಲಲಾಟಬಿಂಬದಲ್ಲಿ ಗಜಲಕ್ಷ್ಮಿ, ಮೇಲ್ಭಾಗ ದ್ರಾವಿಡ ಶಿಖರಪಟ್ಟಿಕೆ, ಇಕ್ಕೆಲಗಳಲ್ಲಿ ಪದ್ಮ ಒಡಿದು ನಿಂತಿರುವ ದ್ವಾರಪಾಲಕರ ವಿಗ್ರಹಗಳಿವೆ. ಒಳಗೆ ಯಾವುದೇ ಶಿಲ್ಪವಿಲ್ಲ. ಪೂರ್ವ, ಪಶ್ಚಿಮದ ಗರ್ಭಗೃಹಗಳು ಇದೇ ಮಾದರಿಯಲ್ಲಿವೆ. ಆದರೆ ಪೂರ್ವದ ಪ್ರವೇಶದ್ವಾರಕ್ಕೆ ದ್ವಾರಪಾಲಕರ ಬದಲಾಗಿ ಕಂಭಗಳಿವೆ. ಇದರಲ್ಲೂ ಯಾವುದೇ ಶಿಲ್ಪವಿಲ್ಲ. ಪಶ್ಚಿಮದ ಪ್ರವೇಶದ್ವಾರಕ್ಕ ತ್ರಿಶೂಲ, ಡಮರು, ಗದಾ ಒಡಿದುನಿಂತ ದ್ವಾರಪಾಲಕರ ಶಿಲ್ಪಗಳಿವೆ. ಒಳಗೆ ಸಭಾಮಂಟಪದ ಮಧ್ಯ ನಾಲ್ಕು ಕಂಬಗಳು ಕೆಳಗೆ, ಮೇಲೆ ಚೌಕ, ಮಧ್ಯ 8–16–8 ಭಾಗದ ಪಟ್ಟಿಕೆ ಅದರಲ್ಲಿ ಪದ್ಮ ಮತ್ತು ಕುಂಭ ಭಾಗದಲ್ಲಿ ಕೀರ್ತಿಮುಖಗಳಿವೆ. ಮೇಲ್ಭಾಗ ವೃತ್ತಾಕಾರದ ಮುಚ್ಚಳ ಚೌಕಾಕಾರದ ಫಲಕ, ಭೋದಿಗೆಗಳಿಂದ ಕೂಡಿವೆ. ಸಭಾಮಂಟಪದಲ್ಲಿ ನಾಗ ಮತ್ತು ಎರಡು ಬೃಹತ ನಂದಿ ಶಿಲ್ಪಗಳಿವೆ. ಇವುಗಳಿಂದಲೇ ಇದಕ್ಕೆ ಬಸವಣ್ಣ ದೇವಾಲಯವೆಂದು ಹೆಸರು ಬಂದಿರಬೇಕು.

ಈ ಮುಖಮಂಟಪದ ಇಕ್ಕೆಲಗಳಲ್ಲಿ ಜಗತಿಗಳು ಅವುಗಳ ಮೇಲೆ ಎರಡರಂತೆ ನಕ್ಷತ್ರಾಕಾರದ ಕಂಬಗಳಿವೆ. ಸರಳ ಶೈಲಿಯ ಹೊರಗೋಡೆ ಅಲ್ಲಲ್ಲಿ ಹಂಸಸರಿತ, ಮುಂಸರಿತಗಳಿಂದ ಕೂಡಿದೆ. ಅಧಿಷ್ಠಾನ ಭಾಗ ನೆಲದಲ್ಲಿ ಹೂತಿರುವುದರಿಂದ ಅದರ ಆಕಾರ ಸ್ಪಷ್ಟವಾಗುವುದಿಲ್ಲ. ಕೆಲವು ತ್ರಿಕೂಟಾಚಲ ದೇವಾಲಯಗಳ ಅಂತರಾಳದ ಮೇಲ್ಭಾಗದಲ್ಲಿ ಮಕರತೋರಣ, ಹೂಬಳ್ಳಿ, ಹಾರಗಳನ್ನು ಕಾಣಬಹುದು. ಗರ್ಭಗೃಹದ ಪ್ರವೇಶದ್ವಾರದಲ್ಲಿ ಪದ್ಮ, ಕುಂಬ, ಸಿಂಹಯಾಳಿಗಳ ಶಿಲ್ಪಗಳನ್ನು ಮತ್ತು ಬಿತ್ತಿಗಳಲ್ಲಿ ಮೂಲದೇವತೆಗಳ ಶಿಲ್ಪಗಳನ್ನು ಕಾಣಬಹುದಾಗಿದ. ಉದಾ: ಬಸರಕೋಡದ ಈಶ್ವರ ದೇವಾಲಯ. ಕೆಲವು ದೇವಾಲಯಗಳ ಸಭಾಮಂಟಪದ ಮೇಲ್ಭಾಗದಲ್ಲಿರುವ ಪಟ್ಟಿಕೆಗಳಲ್ಲಿ ಅಷ್ಟದಿಕ್ಪಾಲಕರು, ಶಿವನ ವಿವಿಧ ಭಂಗಿಗಳಲ್ಲಿರುವ ಶಿಲ್ಪಗಳನ್ನು ಮತ್ತು ವಿವಿಧ ಭಾಗಗಳಲ್ಲಿ ರಾಮಾಯಣ ಮತ್ತು ಮಹಾಭಾರತದಲ್ಲಿ ಬರುವ ವಾನರ ಸೈನ್ಯ, ವಾಲಿಸುಗ್ರೀವರ ಶಿಲ್ಪಗಳನ್ನು ಕಾಣಬಹುದು. ಈ ಶಿಲ್ಪಗಳು ಬಸವನ ಬಾಗೇವಾಡಿಯ ಬಸವೇಶ್ವರ ದೇವಾಲಯದಲ್ಲಿ ಕಂಡುಬರುತ್ತವೆ.

ಕಕ್ಕಳಮೇಲಿಯಲ್ಲಿರುವ 1070ರ ಶಾಸನವು ಪಟ್ಟಮಹಾದೇವಿ ಕಂಚಲ ಮಹಾದೇವಿಯು ತ್ರೈಪುರುಷ ದೇವಾಲಯವೊಂದನ್ನು ನಿರ್ಮಾಣ ಮಾಡಿಸಿ ದೇವರಿಗೆ ಭೂಮಿಯನ್ನು ದಾನಮಾಡಿದ ಉಲ್ಲೇಖವಿದೆ.

ವಡವಡಗಿಯ ಸಂಗಮೇಶ್ವರ ದೇವಾಲಯವು ತ್ರೈಪುರುಷ ದೇವಾಲಯವಾಗಿದೆ ಆದರೆ ಏಕಕೂಟ ದೇವಾಲಯವಾಗಿದೆ.ಗರ್ಭಗೃಹದಲ್ಲಿ ಆಯತಾಕಾರದ ಪೀಠದ ಮೇಲೆ ಉಮಾಮಹೇಶ್ವರ, ಲಿಂಗ, ಲಕ್ಷ್ಮೀನಾರಾಯಣರ ಶಿಲ್ಪಗಳಿವೆ ದ್ವಾರಶಾಖೆಯಲ್ಲಿ ಶೈವ, ವೈಷ್ಣವ ದ್ವಾರಪಾಲಕರ ಶಿಲ್ಪಗಳಿವೆ. ಇದೊಂದು ವೈಷ್ಣವ ದೇವಾಲಯವಾಗಿದೆ.

ಇಂಗಳೇಶ್ವರದ ಸೋಮೇಶ್ವರ ದೇವಾಲಯವು ತ್ರಿಕೂಟಾಚಲವಾಗಿದ್ದು ಪಶ್ಚಿಮದ ಮುಖ ಗರ್ಭಗೃಹದಲ್ಲಿ ಯೋನಿಪಾಣಿ ಲಿಂಗವಿದ್ದು ದ್ವಾರದಲ್ಲಿ ವೈಷ್ಣವ ದ್ವಾರಪಾಲರ ಶಿಲ್ಪಗಳನ್ನು ಕಾಣಬಹುದಾಗಿದೆ ಅಲ್ಲಿರುವ ಲಿಂಗವನ್ನು ನಂತರದ ಅವಧಿಯಲ್ಲಿ ಪ್ರತಿಷ್ಠಾಪಿಸಲಾಗಿರಬಹುದಾಗಿದೆ.

ಇಂಡಿ ತಾಲೂಕಿನಲ್ಲಿರುವ ಸಾಲೋಟಗಿ ಗ್ರಾಮವು ರಾಷ್ಟ್ರಕೂಟರ ಕಾಲದ ಪ್ರಸಿದ್ಧ ಶಿಕ್ಷಣ ಕೇಂದ್ರವಾಗಿದ್ದು ಶಾಸನೋಕ್ತ ಈ ಗ್ರಾಮವು ಶಾಲಾ ಪಾವಿಟ್ಟಿಗೆ ಎಂದು ಕರೆಯಲ್ಪಟ್ಟಿದೆ. ರಾಷ್ಟ್ರಕೂಟ ದೊರೆಯಾದ ಮೂರನೇ ಕೃಷ್ಣನ ಕಾಲದಲ್ಲಿ ಹೊರಡಿಸಲಾದ ಕ್ರಿ.ಶ.945ರ ಶಾಸನದಲ್ಲಿ ಚಕ್ರಾಯುಧನೆಂಬ ಅಧಿಕಾರಿಯು ಪಾವಿಟ್ಟಿಗೆಯಲ್ಲಿ ವಿದ್ಯಾಲಯ ಸ್ಥಾಪಿಸಿದನೆಂದು ಉಲ್ಲೇಖವಿದೆ ಈ ಪಾವಿಟ್ಟಿಗೆಯೇ ಸಾಲೋಟಗಿಯಾಗಿದೆ ಎಂಬುದನ್ನು ತಿಳಿಯಬಹುದಾಗಿದೆ. ಚಕ್ರಾಯುಧನು ಗ್ರಾಮದ 200ಜನ ಬ್ರಾಹ್ಮಣೋತ್ತಮರೊಡಗೂಡಿ ಅಲ್ಲಿಯ ಶಾಲೆಯ ವಿದ್ಯಾರ್ಥಿ ಸಂಘಕ್ಕೆ 500 ನಿವರ್ತನ ಭೂಮಿಯನ್ನು ದಾನಮಾಡಿದ ಉಲ್ಲೇಖವೂ ಇದೆ. ಅಲ್ಲದೇ ಕ್ರಿ.ಶ.11–12ನೇ ಕಾಲಾವಧಿಯಲ್ಲಿ ರಚಿತವಾದ ಶಾಸನದಲ್ಲಿ ಗೋವಣರಸ ಎಂಬವನು ಈ ಗ್ರಾಮದಲ್ಲಿರುವ ತ್ರೈಪುರುಷ ದೇವಾಲಯಕ್ಕೆ ಭೂದಾನ ಮಾಡಿದ ಮಾಹಿತಿಯನ್ನು ವಿವರಿಸುತ್ತದೆ.

ಮತ್ತೊಂದು ಅಭಿಮತದ ಪ್ರಕಾರ ದಾನಪಾರ್ಯನ ಮಗನಾದ ನಾರಾಯಣ ಎಂಬ ವಿದ್ವಾಂಸನು ಕ್ರಿ.ಶ.945ರ ಕಾಲದಲ್ಲಿ ಒಂದು ಶಾಲೆಯನ್ನು ಸ್ಥಾಪಿಸಬೇಕೆಂದು ಯೋಚಿಸಿ ಅಲ್ಲಿ ತ್ರೈಪುರಷ ದೇವರನ್ನು ಪ್ರತಿಷ್ಠಾಪಿಸಿದನೆಂದು ತಿಳಿಯುವುದು.

ಒಟ್ಟಾರೆ ವಿಜಾಪುರ ಜಿಲ್ಲೆಯ ಪ್ರತಿಯೊಂದು ಐತಿಹಾಸಿಕ ಗ್ರಾಮಗಳು ಆಳರಸರ ಕಲೆಯ ಕೇಂದ್ರಗಳಾಗಿದ್ದು ಅಂದಿನ ಕಲಾ ವೈಭವವನ್ನು ಮತ್ತೊಮ್ಮೆ ಸ್ಮರಣೆಗೆ ತರುವುದರ ಮೂಲಕ ಪ್ರಸ್ತುತ ಸಮಾಜದ ಜನರಲ್ಲಿ ಕಲಾಶೈಲಿಯ

ಪ್ರಾವಿಣ್ಯತೆ, ಸರ್ವಧರ್ಮಗಳ ಸಮನ್ವಯತೆಯ ಭಾವನೆ, ಶೈಕ್ಷಣಿಕ ಪ್ರಗತಿಯ ಕುರಿತಾದ ಅರಿವನ್ನು ಮೂಡಿಸುವುದಲ್ಲದೆ; ಇಂತಹ ಎಷ್ಟೋ ಸ್ಮಾರಕಗಳು, ತ್ರಿಕೂಟಾಚಲ ದೇವಾಲಯಗಳಲ್ಲಿ ಕೆಲವೊಂದು ಸಂಪೂರ್ಣವಾಗಿ ನಶಿಸಿದ್ದರೆ ಮತ್ತೆ ಕೆಲವು ದೇವಾಲಯಗಳು ನಶಿಸುವತ್ತ ಸಾಗುತ್ತವೆ. ಆದುದರಿಂದ ಪ್ರತಿಯೊಬ್ಬ ಐತಿಹಾಸಿಕ ಪರಿಜ್ಞಾನ ಹೊಂದಿದ ನಾಗರಿಕನು ಪ್ರಾಚೀನ ದೇವಾಲಯಗಳ ರಕ್ಷಣೆಯತ್ತ ಶ್ರಮಿಸಬೇಕು ಮತ್ತು ಸರಕಾರಗಳು ಮತ್ತು ಪ್ರವಾಸೋಧ್ಯಮ ಇಲಾಖೆಗಳ ಗಮನಕ್ಕೆ ಅವಸಾನದ ಅಂಚಿನಲ್ಲಿರುವ ದೇವಾಲಯಗಳ ರಕ್ಷಣೆ ಮಾಡುವಂತೆ ಸಹಕಾರಕೋರಬೇಕು. ಅಂದಾಗ ಮಾತ್ರ ಇಂತಹ ದೇವಾಲಯಗಳು ಮತ್ತೆ ತಮ್ಮ ವೈಭವವನ್ನು ಕಂಡುಕೊಂಡು ಪ್ರವಾಸಿಗರನ್ನು ತಮ್ಮತ್ತ ಆಕರ್ಷಿಸುವುದರಲ್ಲಿ ಯಾವ ಸಂದೇಹವೂ ಇಲ್ಲ. ಈ ಹಿನ್ನೆಲೆಯಲ್ಲಿ ವಿಚಾರ ಸಂಕಿರಣ ಯಶಸ್ವಿಯಾಗಲಿ ಎಂದು ಹಾರೈಸುತ್ತೇವೆ.

**ವಿಜಾಯಪುರ ಜಿಲ್ಲೆಯಲ್ಲಿರುವ ಶೈವ ತ್ರಿಕೂಟಾಚಲ ದೇವಾಲಯಗಳು**

| ಗ್ರಾಮ | ತಾಲೂಕು | ದೇವಾಲಯ | | ಕಾಲಾವಧಿ |
|---|---|---|---|---|
| ಅಗರಖೇಡ | ಇಂಡಿ | ಶಂಕರಲಿಂಗ | ದೇವಾಲಯ | ಕ್ರಿ.ಶ. 1170 |
| ಮಿರಗಿ | ಇಂಡಿ | ಸಂಗಮೇಶ್ವರ | ದೇವಾಲಯ | ಕ್ರಿ.ಶ. 12ನೇ ಶತಮಾನ |
| ಹಿರೇಬೇವಿನೂರ | ಇಂಡಿ | ಮಲ್ಲಿಕಾರ್ಜುನ | ದೇವಾಲಯ | ಕ್ರಿ.ಶ. 12ನೇ ಶತಮಾನ |
| ಕಡಲೆವಾಡ | ಸಿಂದಗಿ | ಈಶ್ವರ | ದೇವಾಲಯ | ಕ್ರಿ.ಶ. 1172 |
| ಮಲಘಾಣ | ಸಿಂದಗಿ | ಬಸವಣ್ಣ | ದೇವಾಲಯ | ಕ್ರಿ.ಶ. 12ನೇ ಶತಮಾನ |
| ಯರಗಲ್ | ಸಿಂದಗಿ | ರಾಮೇಶ್ವರ | ದೇವಾಲಯ | ಕ್ರಿ.ಶ. 1098 |
| ಯಂಕಂಚಿ | ಸಿಂದಗಿ | ಈಶ್ವರ | ದೇವಾಲಯ | ಕ್ರಿ.ಶ. 12ನೇ ಶತಮಾನ |
| ಬೆನಕೋಟಗಿ | ಸಿಂದಗಿ | ಮಹದೇವ | ದೇವಾಲಯ | ಕ್ರಿ.ಶ. 12ನೇ ಶತಮಾನ |
| ದೇವರನಾವದಗಿ | ಸಿಂದಗಿ | ಮಲ್ಲಿಕಾರ್ಜುನ | ದೇವಾಲಯ | ಕ್ರಿ.ಶ. 12ನೇ ಶತಮಾನ |
| ಕತ್ನಳ್ಳಿ | ಬಿಜಾಪುರ | ಮಲ್ಲಿಕಾರ್ಜುನ | ದೇವಾಲಯ | ಕ್ರಿ.ಶ. 12ನೇ ಶತಮಾನ |
| ಸಿರಸಗಿ | ಸಿಂದಗಿ | | | ಕ್ರಿ.ಶ. 12ನೇ ಶತಮಾನ |
| ಇಟಗಿ | ಬಾಗೇವಾಡಿ | ರಾಮಲಿಂಗ | ದೇವಾಲಯ | ಕ್ರಿ.ಶ. 12ನೇ ಶತಮಾನ |
| ಬಸರಕೋಡ | ಮುದ್ದೇಬಿಹಾಳ | ಈಶ್ವರ | ದೇವಾಲಯ | ಕ್ರಿ.ಶ. 12ನೇ ಶತಮಾನ |

**ತ್ರೈಪುರುಷ ದೇವಾಲಯಗಳು**

| ಗ್ರಾಮ | ತಾಲೂಕು | ದೇವಾಲಯ | | ಕಾಲಾವಧಿ |
|---|---|---|---|---|
| ಕಕ್ಕಳಮೇಲಿ | ಸಿಂದಗಿ | ಶಿವದೇವಾಲಯ | | ಕ್ರಿ.ಶ. 1070 |
| ವಡವಡಗಿ | ಬಾಗೇವಾಡಿ | ಸಂಗಮೇಶ್ವರ | ದೇವಾಲಯ | 12ನೇ ಶತಮಾನ |
| ಇಂಗಳೇಶ್ವರ | ಬಾಗೇವಾಡಿ | ಸೋಮೇಶ್ವರ | ದೇವಾಲಯ | 12ನೇ ಶತಮಾನ |
| ಸಾಲೋಟಗಿ | ಇಂಡಿ | ತ್ರೈಪುರುಷ | ದೇವಾಲಯ | ಕ್ರಿ.ಶ. 945 |

**ವೈಷ್ಣವ ಧರ್ಮದ ತ್ರಿಕೂಟಾಚಲ ದೇವಾಲಯಗಳು**

| ಗ್ರಾಮ | ತಾಲೂಕು | ದೇವಾಲಯ | | ಕಾಲಾವಧಿ |
|---|---|---|---|---|
| ಇಂಗಳೇಶ್ವರ | ಬಾಗೇವಾಡಿ | ನಾರಾಯಣ | ದೇವಾಲಯ | ಕ್ರಿ.ಶ.1176 |
| ಮುತ್ತಗಿ | ಬಾಗೇವಾಡಿ | ಲಕ್ಷ್ಮೀನಾರಾಯಣ | ದೇವಾಲಯ | 12ನೇ ಶ ಆರಂಭ. |
| | | ಹರಿಹರ ದೇವಾಲಯ | | |

**ಪರಾಮರ್ಶನ ಗ್ರಂಥಗಳು :**

1. ರಾಮಚಂದ್ರರಾವ್ ಎಸ್.ಕೆ. ಭಾರತದ ದೇವಾಲಯ ನೆಲೆ–ಹಿನ್ನಲೆ, ಐಬಿಎಚ್ ಪ್ರಕಾಶನ, ಬೆಂಗಳೂರು 1979.
2. ಸತೀಶ್.ಕೆ, ವಿಜಯನಗರ ಕಾಲದ ಶೈವದೇವಾಲಯಗಳು, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು–560018, 2008
3. ಕುಲಕರ್ಣಿ ಡಿ.ಜಿ., ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳು, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ ಧಾರವಾಡ–580001 2007–08
4. ಕರ್ನಾಟಕ ದೇವಾಲಯ ಕೋಶ, ವಿಜಾಪುರ ಜಿಲ್ಲೆ.
5. S.I.I.XX. III,
6. ಚಿಂಚೋಳಿ ಸುಭಾಸ ಪ್ರಾಕ್ತನಶಾಸ್ತ್ರದ ಹಿನ್ನಲೆಯಲ್ಲಿ ಬಿಜಾಪುರ ಜಿಲ್ಲೆಯಲ್ಲಿರುವ ಕಲ್ಯಾಣ ಚಾಲುಕ್ಯರ ಕಾಲದ ವಾಸ್ತು ಮತ್ತು ಶಿಲ್ಪಕಲೆಯ ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1999 ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ
7. ಮುನಿಸ್ವಾಮಿ ಆರ್. (ಸಂ), ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ವಿಜಾಪುರ ಜಿಲ್ಲೆ, ಅಭಿಮಾನಿ ಪ್ರಕಾಶನ, ಬೆಂಗಳೂರು. 1999



THE KARNATAKA
HISTORY CONGRES

ISBN 819206814-5
9 788192 068145